ಅದೃಷ್ಟವೇ ಸರಿಯಿಲ್ಲ, ಈ ಜನ್ಮದಲ್ಲಿ ನಮ್ಮೂರಿಗೆ ಕನೆಕ್ಷನ್ ಸಿಗಲ್ಲ, ನಡೀರಲೇ...' ಎಂದು ತಮ್ಮನ್ನೇ ಹಳಿದುಕೊಂಡು ಊರ ಕಡೆ ಹೊರಟರು.

ಅರ್ಧ ಕಿಲೋಮೀಟರ್ ಹೋದ ನಂತರ ಯಾಕೋ ಯಾರೋ ಒಬ್ಬ ನಡುನೀರ ಕಡೆ ನೋಡಿ, ಸಂಜೆಯ ಮಬ್ಬುಗತ್ತಲಲ್ಲಿ ಆ ಕಡೆ ಹಾಲ್ಟ್‌ಗೆಂದು ಹೋಗಿದ್ದ ಲಾಂಚು ತಿರುಗಿ ಬರುತ್ತಿರುವುದನ್ನು ನೋಡಿ ಎಲ್ಲರನ್ನೂ ನಿಲ್ಲಿಸಿದ. 'ಏನೋ ರಿಪೇರಿಯಿರಬೇಕು ಬರ್ರೋ... ಯಾವತ್ತೂ ಇಷ್ಟೊತ್ನಲ್ಲಿ ಈ ಕಡೆಗೆ ಬರದ ಲಾಂಚು ಇವತ್ಯಾಕೆ ಬರ್‍ತೈತೆ...' ಎಂದರೂ ಎರಡ್ಹೆಜ್ಜೆ ಮುಂದಕ್ಕೂ, ಎರಡ್ಹೆಜ್ಜೆ ಹಿಂದಕ್ಕೂ ಇಡುತ್ತ ಎರಡು ಮನಸ್ಸಿನಿಂದ ತೊಯ್ದಾಡಿದರು. 'ಇಷ್ಟೊತ್ತೇ ಕಾಯ್ದಿದ್ದೀವಂತೆ, ನೋಡೇಬಿಡೋಣ ಬರ್ರಲೇ...' ಎಂದು ಒಬ್ಬ ದೃಢಮನಸ್ಸು ಮಾಡಿಯೇಬಿಟ್ಟ.

ಇವರು ಅಲ್ಲಿಗೆ ಹೋಗುವುದಕ್ಕೂ, ಲಾಂಚು ಈ ದಡಕ್ಕೆ ಬರುವುದಕ್ಕೂ ಒಂದೇ ಆಯಿತು. ಅಧಿಕಾರಿಗಳನ್ನು ಬಿಟ್ಟರೆ ಬೇರೆ ಯಾವ ಜನರೂ ಇರಲಿಲ್ಲ. ಮುಸ್ಸಂಜೆಯ ತಿಳಿಬೆಳಕಲ್ಲಿ ನಿಸರ್ಗವನ್ನು ಕಣ್ತುಂಬಿಕೊಳ್ಳುತ್ತ ಕೆಳಗೆ ಇಳಿದ ಮುಖ್ಯ ವ್ಯಕ್ತಿಯನ್ನು ಗುರುತಿಸಲು ಇವರಿಗೆ ಕಷ್ಟವಾಗಲಿಲ್ಲ. ಸುತ್ತಮುತ್ತಲ ಜನರ ಹಾವಭಾವದಿಂದಲೇ ಅವರು ಬಹಳ ದೊಡ್ಡ ವ್ಯಕ್ತಿಯಿರಬೇಕೆಂಬುದು ಇವರಿಗೆ ಮನವರಿಕೆಯಾಗಿಹೋಯಿತು. ಅರ್ಜಿಯನ್ನು ಹಿಡಿದುಕೊಂಡ ಗುಂಪು ಅವರ ಮುಂದೆ ಬರುವುದನ್ನು ಕಂಡ ಉಳಿದ ಅಧಿಕಾರಿಗಳು, 'ಸಾಹೇಬ್ರು ಬರ್‍ತೌವ್ರೇ... ದಾರಿಬಿಡ್ರೀ, ದಾರಿಬಿಡ್ರೀ...' ಎನ್ನುತ್ತ ಅವರನ್ನು ಹಾಗೆಯೇ ಅಕ್ಕಪಕ್ಕಕ್ಕೆ ಸರಿಸಲು ಪ್ರಯತ್ನಿಸಿದರು. ಬೆಳಗ್ಗೆಯಿಂದ, ಬೆಳಗ್ಗಿನಿಂದ ಏನು, ಇಪ್ಪತ್ತೈದು ವರ್ಷಗಳಿಂದ ಕಾಯುತ್ತ ಬಂದಿರುವ ತಮಗೆ ಅವರು ತಮ್ಮ ಅಹವಾಲನ್ನು ಕೇಳಿಸಿಕೊಂಡರೂ ಏನೂ ಪ್ರಯೋಜನವಿರಲಿಕ್ಕಿಲ್ಲ ಎನ್ನುವ ಮನಃಸ್ಥಿತಿಗೆ ಬಂದಿದ್ದರು. ಆದರೆ ಅವರೇ ಮುಂದೆ ಬಂದು, ಮಬ್ಬುಗತ್ತಲೆಯಲ್ಲಿ ಅರ್ಜಿಯನ್ನು ಓದಲಾಗದಿದ್ದರೂ, ಅವರ ಅಹವಾಲು ಏನೆಂದು ಕೇಳಿದರು. ನೂರಾರು ಜನಕ್ಕೆ ಹೇಳಿದ್ದನ್ನೇ ಹೇಳಿ ಹೇಳಿ ಬಾಯಿಪಾಠವಾಗಿದ್ದನ್ನೇ ಇವರ ಮುಂದೆಯೂ ಮಂಡಿಸಿದರು. 'ಸರಿ, ನೋಡೋಣ ನಡೆಯಿರಿ' ಎಂದರು. ಬೆಳಗ್ಗಿನಿಂದ ಹೊಳೆಬಾಗಿಲಿಗೆ ನಾನೂರು ಕೋಟಿ ಅಂದಾಜಿನ ಕೇಬಲ್ ಆಧಾರಿತ ಬ್ರಿಡ್ಜ್ ಸಂಪರ್ಕ ಕಲ್ಪಿಸುವಂಥ ಬೃಹತ್ ಯೋಜನೆಗಾಗಿ ಇನ್‌ಸ್ಪೆಕ್ಷನ್ ಮಾಡಿ ಸುಸ್ತಾಗಿದ್ದಾರೆಂದರೆ, ಈ ಕತ್ತಲೆಯಲ್ಲಿಯೂ ನೋಡೋಣ ಎನ್ನುತ್ತಿರುವ ಅವರ ಉತ್ಸಾಹಕ್ಕೆ ದಂಗಾದರೂ, 'ಇವರದು ಬಗೆಹರಿಯದ ಸಮಸ್ಯೆ

